# ಕರ್ನಾಟಕ ಸರ್ಕಾರ
## ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ,
## ನೃಪತುಂಗ ರಸ್ತೆ, ಬೆಂಗಳೂರು-560001

## ಸುತ್ತೋಲೆ

**ಸಂಖ್ಯೆ: ಸಾಶಿಇ\ಇತರೆ \2012** **ದಿನಾಂಕ: 12-12-2012**

**ವಿಷಯ:** ಸ್ವಾಮಿ ವಿವೇಕಾನಂದರ 150ನೇ ಜನ್ಮ ದಿನಾಚರಣೆಯ ಅಂಗವಾಗಿ ರಾಜ್ಯದ ಎಲ್ಲಾ ಕಿರಿಯ ಪ್ರಾಥಮಿಕ ಶಾಲೆಗಳ 4, 5ನೇ ತರಗತಿ, ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳಲ್ಲಿ ದಿನಾಂಕ: 7.1.2013 ರಿಂದ ದಿನಾಂಕ: 12.1.2013 ರವರೆಗೆ 'ವಿವೇಕ ಸಪ್ತಾಹ' ಆಚರಿಸುವ ಕುರಿತು.

*******

1. ರಾಷ್ಟ್ರ ಕಂಡ ಮಹಾನ್ ದಾರ್ಶನಿಕ, ತತ್ವಶಾಸ್ತ್ರಜ್ಞ, ಚಿಂತಕ, ಶಿಕ್ಷಣತಜ್ಞ ಸ್ವಾಮಿ ವಿವೇಕಾನಂದರ (12/1/1863 – 4/7/1902) ಜನ್ಮ ದಿನಾಚರಣೆಯಾದ ಜನವರಿ 12ನ್ನು ದೇಶದಾದ್ಯಂತ **'ರಾಷ್ಟ್ರೀಯ ಯುವ ದಿನಾಚರಣೆ'** ಯಾಗಿ ಆಚರಿಸಲಾಗುತ್ತಿದೆ. ಭಾರತೀಯ ಯುವ ಜನಾಂಗಕ್ಕೆ ಸ್ವಾಮಿ ವಿವೇಕಾನಂದರ ಆದರ್ಶ ಹಾಗೂ ವಿಚಾರಧಾರೆಗಳು ಸ್ಫೂರ್ತಿದಾಯಕವಾಗಲಿ ಎಂಬ ಸದಾಶಯದಿಂದ 1984 ರಿಂದ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು **'ರಾಷ್ಟ್ರೀಯ ಯುವ ದಿನಾಚರಣೆ'**ಯನ್ನಾಗಿ ಆಚರಿಸಲು ಭಾರತ ಸರ್ಕಾರವು ಸೂಚಿಸಿದೆ.

2. ಜನವರಿ 12, 2013ರ ಶನಿವಾರವು ಸ್ವಾಮಿ ವಿವೇಕಾನಂದರ 150ನೇ ಜನ್ಮ ದಿನಾಚರಣೆಯಾಗಿರುವ ಪ್ರಯುಕ್ತ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಾಥಮಿಕ ಶಾಲೆಗಳ 4, 5ನೇ ತರಗತಿ, ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳಲ್ಲಿ **ದಿನಾಂಕ: 7.1.2013 ರಿಂದ ದಿನಾಂಕ: 12.1.2013** ರವರೆಗೆ ಸ್ವಾಮಿ ವಿವೇಕಾನಂದರ ತತ್ವ, ಆದರ್ಶ, ವಿಚಾರಧಾರೆಗಳನ್ನು ಮಕ್ಕಳಿಗೆ ತಿಳಿಯಪಡಿಸುವ ವಿವಿಧ ಚಟುವಟಿಕೆಗಳ ಮೂಲಕ 'ವಿವೇಕ ಸಪ್ತಾಹ'ವನ್ನು ಶ್ರದ್ಧಾಪೂರ್ವಕವಾಗಿ ಆಚರಿಸಲು ತೀರ್ಮಾನಿಸಲಾಗಿದೆ.

3. 'ವಿವೇಕ ಸಪ್ತಾಹ'ದ ಅಂಗವಾಗಿ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳ 4, 5ನೇ ತರಗತಿ, ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳ ಮಕ್ಕಳಿಗೆ **ದಿನಾಂಕ: 7.1.2013** ರಿಂದ **ದಿನಾಂಕ: 11.1.2013** ರವರೆಗೆ ಮಧ್ಯಾಹ್ನದ ಕೊನೆಯ ಎರಡು ಅವಧಿಗಳಲ್ಲಿ ಈ ಕೆಳಗಿನ ಸ್ಪರ್ಧೆಗಳನ್ನು ತರಗತಿ ಮಟ್ಟದಲ್ಲಿ ತರಗತಿ ಶಿಕ್ಷಕರ ನೇತೃತ್ವದಲ್ಲಿ ಹಮ್ಮಿಕೊಳ್ಳಲು ಸೂಚಿಸಿದೆ.

| ಕ್ರಮ ಸಂಖ್ಯೆ | ಸ್ಪರ್ಧೆ | ಸ್ಪರ್ಧೆಯ ಉದ್ದೇಶ | ವಿವರ |
|---|---|---|---|
| 1 | ಭಾಷಣ ಸ್ಪರ್ಧೆ | ಸ್ವಾಮಿ ವಿವೇಕಾನಂದರ ಉದಾತ್ತ ಚಿಂತನೆಗಳು ಹಾಗೂ ಆದರ್ಶಗಳು ಮಕ್ಕಳಿಗೆ ತಿಳಿಯಪಡಿಸುವುದು. | • ಸ್ವಾಮಿ ವಿವೇಕಾನಂದರ ಜೀವನ, ವ್ಯಕ್ತಿತ್ವ, ರಾಷ್ಟ್ರೀಯತೆ, ವಿಚಾರಧಾರೆ ಕುರಿತಂತೆ ಮಕ್ಕಳಿಗೆ ಭಾಷಣ ಸ್ಪರ್ಧೆ ಹಮ್ಮಿಕೊಳ್ಳುವುದು.<br>• ಭಾಗವಹಿಸುವ ಮಕ್ಕಳಿಗೆ ಅಗತ್ಯ ಪುಸ್ತಕಗಳನ್ನು ಶಾಲಾ ಗ್ರಂಥಾಲಯದಿಂದ ನೀಡುವುದು ಹಾಗೂ ಭಾಷಣ ಮಾಡಲು ಅಗತ್ಯ ವಿಷಯಗಳ ಟಿಪ್ಪಣಿ ಒದಗಿಸಿ, ಭಾಷಣದಲ್ಲಿ ಹೆಚ್ಚು ಮಕ್ಕಳು ಭಾಗವಹಿಸುವಂತೆ ಪ್ರೇರೇಪಿಸುವುದು. |
| 2 | ಭಾವಚಿತ್ರ ಬರೆಯುವ ಸ್ಪರ್ಧೆ | • ಮಕ್ಕಳಲ್ಲಿ ಚಿತ್ರ ಬರೆಯುವ ಕೌಶಲ ಅಭಿವೃದ್ಧಿಪಡಿಸುವುದು.<br>• ಸ್ವಾಮಿ ವಿವೇಕಾನಂದರ ಭಾವಚಿತ್ರ ಮಕ್ಕಳ ಮನಸ್ಸಿನಲ್ಲಿ ನೆಲೆನಿಲ್ಲುವಂತೆ ಮಾಡುವುದು. | • ಸ್ವಾಮಿ ವಿವೇಕಾನಂದರ ಭಾವಚಿತ್ರ ಬರೆಯುವ ಸ್ಪರ್ಧೆಯನ್ನು ಹಮ್ಮಿಕೊಳ್ಳುವುದು.<br>• ಸ್ವಾಮಿ ವಿವೇಕಾನಂದರ ಯಾವುದೇ ಭಾವಚಿತ್ರವನ್ನು ಬರೆಯುವಂತೆ ಸೂಚಿಸುವುದು. |
| 3 | ನುಡಿಮುತ್ತು ಬರೆಯುವ ಸ್ಪರ್ಧೆ | ಸ್ವಾಮಿ ವಿವೇಕಾನಂದರು ವಿವಿಧ ಸಂದರ್ಭ, ಸನ್ನಿವೇಶಗಳಲ್ಲಿ ಅನೇಕ ವಿಷಯಗಳ ಬಗ್ಗೆ ಉಲ್ಲೇಖಿಸಲ್ಪಟ್ಟ ನುಡಿಮುತ್ತುಗಳಲ್ಲಿ ಅವರ ವಿಚಾರಧಾರೆಯು ಅಡಕವಾಗಿದ್ದು, ಈ ನುಡಿಮುತ್ತುಗಳ ಮೂಲಕ ಸ್ವಾಮಿ ವಿವೇಕಾನಂದರ ವಿಚಾರಧಾರೆಯನ್ನು ಮಕ್ಕಳಿಗೆ ತಿಳಿಸುವುದು. | • ನುಡಿಮುತ್ತುಗಳು ಹಾಗೂ ಆ ನುಡಿಮುತ್ತುಗಳ ಅರ್ಥ ವಿವರಿಸುವ ಸಂಕ್ಷಿಪ್ತ ಸಾರಾಂಶವನ್ನು (4–5 ವಾಕ್ಯಗಳಲ್ಲಿ) ಬರೆಯುವಂತೆ ಸೂಚಿಸುವುದು.<br>• ನುಡಿಮುತ್ತುಗಳ ಸಂಗ್ರಹವಿರುವ ಪುಸ್ತಕ/ಮಾಹಿತಿ ಒದಗಿಸುವ ಮೂಲಕ ಹೆಚ್ಚು ಮಕ್ಕಳು ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವುದು. |
| 4 | ಛದ್ಮವೇಷ ಸ್ಪರ್ಧೆ | ಸ್ವಾಮಿ ವಿವೇಕಾನಂದರ ವೇಷಭೂಷಣವನ್ನು ಧರಿಸಿ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಸೂಚಿಸುವುದು. | • ಈ ಸ್ಪರ್ಧೆಯನ್ನು 1, 2 ಮತ್ತು 3ನೇ ತರಗತಿಗಳ ಮಕ್ಕಳನ್ನು ಒಳಗೊಂಡಂತೆ ಎಲ್ಲಾ ಮಕ್ಕಳಿಗೆ ಏರ್ಪಡಿಸುವುದು. |

ಮೇಲಿನ ಸ್ಪರ್ಧೆಗಳಲ್ಲಿ ಅತ್ಯುತ್ತಮವಾಗಿ ನಿರ್ವಹಿಸಲ್ಪಟ್ಟ ಮೂರು ವಿದ್ಯಾರ್ಥಿಗಳನ್ನು ವಸ್ತುನಿಷ್ಠವಾಗಿ ಆಯ್ಕೆ ಮಾಡುವುದು. ಈ ಸಂಬಂಧ, ಸ್ಪರ್ಧೆ ನಡೆಯುವ ಸಂದರ್ಭದಲ್ಲಿ ತರಗತಿ ಶಿಕ್ಷಕರ ಜೊತೆ ಶಾಲೆಯ ಇನ್ನೊಬ್ಬ ಶಿಕ್ಷಕರು ಹಾಜರಿದ್ದು, ಮಕ್ಕಳ ಆಯ್ಕೆ ಮಾಡಲು ಪ್ರಯತ್ನಿಸುವುದು.

4. ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ದಿನದಂದು ಅಂದರೆ ಜನವರಿ 12, 2013ರ ಶನಿವಾರ ಮುಂಜಾನೆ 8.30ಕ್ಕೆ ಸ್ವಾಮಿ ವಿವೇಕಾನಂದರ ಭಾವಚಿತ್ರದೊಂದಿಗೆ ಶಾಲೆಯ ಹತ್ತಿರದ ಪ್ರಮುಖ ಬೀದಿಗಳಲ್ಲಿ **ಮೆರವಣಿಗೆ** ತೆರಳುವುದು. ಮೆರವಣಿಗೆಯಲ್ಲಿ ಶಾಲೆಯ ಎಲ್ಲಾ ಮಕ್ಕಳು, ಶಿಕ್ಷಕರು, ಆಸಕ್ತ ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು ಭಾಗವಹಿಸುವುದು ಹಾಗೂ ಸ್ವಾಮಿ ವಿವೇಕಾನಂದರ ಜಯಘೋಷ ಮೊಳಗಿಸುವುದು.

5. ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯಂದು ಸ್ವಾಮಿ ವಿವೇಕಾನಂದರ ವಿಚಾರಧಾರೆಗಳ ಬಗ್ಗೆ ಉಪನ್ಯಾಸ ನೀಡಲು (ಅರ್ಧ ಗಂಟೆ) ಸ್ಥಳೀಯ ತಜ್ಞರನ್ನು ಆಹ್ವಾನಿಸಿ, ಕಾರ್ಯಕ್ರಮದ ಅತಿಥಿಗಳನ್ನಾಗಿ ಭಾಗವಹಿಸಲು ಕೋರುವುದು. **ಸ್ವಾಮಿ ವಿವೇಕಾನಂದರು ಒಬ್ಬ ಮಹಾ ಮಾನವತಾವಾದಿಯಾಗಿದ್ದು, ಸಮಾಜದ ದೀನ ದಲಿತರ, ಹಿಂದುಳಿದವರ, ಶೋಷಿತರ, ಮಹಿಳೆಯರ ಉದ್ಧಾರಕ್ಕಾಗಿ ಶ್ರಮಿಸಿದ ಮಹಾನ್ ಚೇತನ. ಅವರ ಅಗಾಧ ವ್ಯಕ್ತಿತ್ವ ಹಾಗೂ ಅವರ ಎಲ್ಲಾ ಸಮಾಜಮುಖಿ ಚಿಂತನೆಗಳನ್ನು ಒಳಗೊಂಡ ಉಪನ್ಯಾಸವನ್ನು ನೀಡಲು ತಜ್ಞರಿಗೆ ತಿಳಿಸುವುದು.**

6. ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸುವುದು. ಕಾರ್ಯಕ್ರಮದ ಪೂರ್ವದಲ್ಲಿ ತರಗತಿ ಮಟ್ಟದಲ್ಲಿ ನಡೆದ ಭಾಷಣ ಸ್ಪರ್ಧೆ ಹಾಗೂ ನುಡಿಮುತ್ತುಗಳನ್ನು ಬರೆಯುವ ಸ್ಪರ್ಧೆಯಲ್ಲಿ ವಿಜೇತರಾದ **ಆಯ್ದ ವಿದ್ಯಾರ್ಥಿಗಳಿಂದ ಭಾಷಣ ಹಾಗೂ ನುಡಿಮುತ್ತುಗಳನ್ನು ಹೇಳುವ ಕಾರ್ಯಕ್ರಮ** ಏರ್ಪಡಿಸುವುದು. ಸ್ಪರ್ಧೆಗಳಲ್ಲಿ ವಿಜೇತರಾದ ಎಲ್ಲರಿಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಶಾಲಾ ಮುಖ್ಯ ಶಿಕ್ಷಕರಿಂದ ಸಹಿ ಮಾಡಲ್ಪಟ್ಟ ಪ್ರಮಾಣಪತ್ರ ಹಾಗೂ ಸ್ವಾಮಿ ವಿವೇಕಾನಂದರ ಪುಸ್ತಕಗಳನ್ನು ಬಹುಮಾನವಾಗಿ ನೀಡುವುದು.

7. ಕಾರ್ಯಕ್ರಮ ನಡೆಯುವ ಸಭಾಂಗಣದಲ್ಲಿ ಮಕ್ಕಳು ರಚಿಸಿದ **ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ಗೋಡೆಯ ಮೇಲೆ ಪ್ರದರ್ಶಿಸುವುದು. ಸ್ವಾಮಿ ವಿವೇಕಾನಂದರ ಆಯ್ದ ನುಡಿಮುತ್ತುಗಳನ್ನು ದೊಡ್ಡದಾಗಿ ಹಾಳೆಯ ಮೇಲೆ ಬರೆದು ಗೋಡೆಯ ಮೇಲೆ ಪ್ರದರ್ಶಿಸಲು** ಏರ್ಪಾಡು ಮಾಡುವುದು.

8. ಸಮಾರಂಭದಲ್ಲಿ ಉತ್ತಮ ಯೋಗಪಟುಗಳಾದ ವಿದ್ಯಾರ್ಥಿಗಳಿಂದ **ಯೋಗ ಪ್ರದರ್ಶನ** ಹಾಗೂ ದೇಶಭಕ್ತಿ ಮತ್ತು ನಾಡ ಕುರಿತ ಹಾಡುಗಳನ್ನು \ **ಸಂಗೀತ ಕಾರ್ಯಕ್ರಮವನ್ನು** ವಿದ್ಯಾರ್ಥಿಗಳಿಂದ ಏರ್ಪಡಿಸುವುದು.

9. ತಮ್ಮ ಊರಿನಲ್ಲಿರುವ ಸಂಘ ಸಂಸ್ಥೆಗಳಿಂದ ಜನವರಿ 12 ರಂದು ನಡೆಯುವ ಕಾರ್ಯಕ್ರಮ ಒಟ್ಟಾಗಿ ನಡೆಯುವ ಅವಕಾಶವಿದ್ದರೆ ನಮ್ಮ ಶಾಲಾ ವಿದ್ಯಾರ್ಥಿಗಳು ಭಾಗವಹಿಸುವಂತೆ ಕಾರ್ಯಕ್ರಮ ರೂಪಿಸುವುದು. ಪ್ರತಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಕಡ್ಡಾಯವಾಗಿ ಈ ಕಾರ್ಯಕ್ರಮ ನಡೆಸಲೇಬೇಕು. ಹೆಚ್ಚಿನ ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ತೊಡಗುವಂತೆ ಗಮನ ಕೊಡಬೇಕು.

10. ಸ್ವಾಮಿ ವಿವೇಕಾನಂದರ 150ನೇ ವರ್ಷಾಚರಣೆಯ ಕಾರ್ಯಕ್ರಮ ಪ್ರಭಾವಿಯಾಗಿ ನಡೆಯುವಂತೆ ಯುವಕರಲ್ಲಿ ಸ್ಫೂರ್ತಿ ಮೂಡಿಸುವಂತಹ ಕಾರ್ಯಕ್ರಮವಾಗಲಿ. ಮಾಧ್ಯಮದಲ್ಲಿಯು ಹೆಚ್ಚು ಪ್ರಚಾರ ಕಾರ್ಯಕ್ರಮಕ್ಕೆ ಸಿಗುವಂತೆ ಗಮನವಹಿಸಿ.

11. ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ಕಾರ್ಯಕ್ರಮದ ಕುರಿತಾದ ಫೋಟೋ ಸಹಿತ ವರದಿಯನ್ನು ಪ್ರತಿ ಶಾಲೆಯು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸಲ್ಲಿಸುವುದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸರ್ಕಾರಿ, ಅನುದಾನಿತ, ಅನುದಾನರಹಿತ ಕಿರಿಯ ಪ್ರಾಥಮಿಕ ಶಾಲೆಗಳ 4, 5ನೇ ತರಗತಿ, ಹಿರಿಯ ಪ್ರಾಥಮಿಕ ಶಾಲೆಗಳು ಮತ್ತು ಪ್ರೌಢ ಶಾಲೆಗಳ ತಲಾ ಒಂದು ಉತ್ತಮ ವರದಿಯನ್ನು ಆಯ್ಕೆ ಮಾಡಿ ಆಯುಕ್ತರ ಕಛೇರಿ ಬೆಂಗಳೂರಿನ ಶಿಕ್ಷಣ ವಾರ್ತೆ ವಿಭಾಗಕ್ಕೆ ಕಳುಹಿಸುವುದು. ಶಿಕ್ಷಣ ವಾರ್ತೆ ವಿಭಾಗವು ಫೆಬ್ರವರಿ 2013ರ ಸಂಚಿಕೆಯಲ್ಲಿ ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯ ವಿಶೇಷ ವರದಿಯನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲು ಸೂಚಿಸಿದೆ.

12. ಸ್ವಾಮಿ ವಿವೇಕಾನಂದರ ಜನ್ಮ ದಿನಾಚರಣೆಯನ್ನು ಈ ಸುತ್ತೋಲೆಯಲ್ಲಿರುವ ಅಂಶಗಳಂತೆ ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ಈ ಸುತ್ತೋಲೆಯ ಪ್ರತಿಯನ್ನು ಪ್ರತಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗೆ ತಲುಪಿಸುವ ವ್ಯವಸ್ಥೆ ಮಾಡಲು ಸೂಚಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು

ಗೆ,

1. ಎಲ್ಲಾ ಜಿಲ್ಲೆಯ ಉಪ ನಿರ್ದೇಶಕರು (ಆಡಳಿತ). ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು (ಅಭಿವೃದ್ಧಿ), ಡಯಟ್
2. ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು
3. ಎಲ್ಲಾ ಸಮೂಹ ಸಂಪನ್ಮೂಲ ವ್ಯಕ್ತಿಗಳು, ಎಲ್ಲಾ ಶಾಲಾ ಮುಖ್ಯ ಶಿಕ್ಷಕರು– ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ.

ಪ್ರತಿಗಳು:

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು– ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಅ ಮತ್ತು ರಾ.ಮಾ.ಶಿ.ಅ, ಬೆಂಗಳೂರು– ಮಾಹಿತಿ ಹಾಗೂ ಸಮನ್ವಯಕ್ಕಾಗಿ.
3. ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ ಹಾಗೂ ಗುಲ್ಬರ್ಗಾ-- ಮಾಹಿತಿ ಹಾಗೂ ಅನುಪಾಲನೆಗಾಗಿ